**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಪಿ.ಸಿ.ಆರ್. ನಂ. 24/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಯತೀಶ್ ಕುಮಾರ್ ಎನ್ |
| ತಂದೆಯ ಹೆಸರು | : | ಮಾಲೇಗೌಡ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಸಾಯ ಮತ್ತು ರಾಜಕೀಯ |
| ವಾಸಸ್ಥಳ | : | ಶಿಂಡೇನಹಳ್ಳಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 20.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಭಾರತ ದಂಡ ಪ್ರಕ್ರಿಯೆ ಸಂಹಿತೆ ಕಲಂ 200 ಸಹವಾಚಕ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ರಡಿಯಲ್ಲಿ ಪಿರ್ಯಾದುದಾರನ ಪ್ರಮಾಣ ಪೂರ್ವ ಹೇಳಿಕೆಃ ಪಿರ್ಯಾದಿ ಪರ ಶ್ರೀ. ಸ್ವಾಮಿ / ಶ್ರೀ. ಬಿ.ಹೆಚ್.ಆರ್. ವಕೀಲರಿಂದಃ**

ನಾನು ಹೆಚ್.ಡಿ. ಕೋಟೆಯ ಶಿಂಡೇನಹಳ್ಳಿ ಗ್ರಾಮದ ವಾಸಿಯಾಗಿದ್ದು, ವ್ಯವಸಾಯ ಮಾಡಿಕೊಂಡು ರಾಜಕೀಯದಲ್ಲಿಯೂ ಸಹ ತೊಡಗಿರುತ್ತೇನೆ. ನಮ್ಮ ಗ್ರಾಮದ ವಾಸಿಯಾದ ಕೆಂಪಮ್ಮ ಎನ್ನುವವರು ಅವರ ಜಮೀನನ್ನು ಹಳ್ಳದಮನುಗನಹಳ್ಳಿ ಗ್ರಾಮದ ರವಿ ಎನ್ನುವವರಿಗೆ ಶುಂಠಿ ವ್ಯವಸಾಯ ಮಾಡಲು ಗುತ್ತಿಗೆಗೆ ನೀಡಿದ್ದು, ಸದರಿ ರವಿಯವರು ಸದರಿ ಜಮೀನಿನಲ್ಲಿ ಶುಂಠಿ ಬೆಳೆ ಬೆಳೆದಿರುತ್ತಾರೆ. ಹೀಗಿರುವಾಗ 2023 ನೇ ಇಸವಿಯ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಸದರಿ ಕೆಂಪಮ್ಮರವರು ನನ್ನ ಬಳಿ

ಬೆಂಗಳೂರು ಮೂಲದ ಆನಂದರಾಜ್ ಎನ್ನುವವರು ಆಕೆಯ ವಿರುದ್ಧ ಪೋಲೀಸ್ ಠಾಣೆಗೆ ದೂರನ್ನು ನೀಡಿರುವುದಾಗಿ ಹಾಗು ಆ ಬಗ್ಗೆ ವಿಚಾರಿಸಲು ತಮ್ಮ ಜೊತೆ ಬರಬೇಕೆಂದು ಕೇಳಿಕೊಂಡಿರುತ್ತಾರೆ. ಆ ಪ್ರಕಾರ ನಾನು ಕೆಂಪಮ್ಮರವರ ಜೊತೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಆಗ ಅಲ್ಲಿ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯ ಪೋಲೀಸ್ ಉಪ-ನಿರೀಕ್ಷಕರಾದ ಆರೋಪಿಯಾದ ರಸೂಲ್ ಪಾಗೇವಾಲ, ಆನಂದರಾಜ್, ಜಗದೀಶ್ ಮತ್ತು ಹಳ್ಳದಮನುಗನಹಳ್ಳಿಯ ರವಿ ಎನ್ನುವವರು ಇದ್ದಿದ್ದರು. ಆಗ ಅಲ್ಲಿ ಸದರಿ ಬೆಂಗಳೂರು ಮೂಲದ ಆನಂದರಾಜ್ ರವರ ಪರವಾಗಿ ಸದರಿ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಆದೇಶವಾಗಿರುವುದಾಗಿ ಹಾಗು ಅವರು ಸದರಿ ಜಮೀನನ್ನು ಜಗದೀಶ ಎನ್ನುವವರಿಗೆ ಮಾರಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ಆಗ ನಾನು ಆರೋಪಿಯ ಬಳಿ ಈ ವಿಚಾರವಾಗಿ ಗ್ರಾಮದಲ್ಲಿ ಎಲ್ಲಾ ಸೇರಿ ಮಾತುಕತೆ ಮಾಡಿ ಸಮಸ್ಯೆ ಬಗೆಹರಿಸೋಣ ಎಂದು ತಿಳಿಸಿ 01 ವಾರ ಕಾಲಾವಕಾಶ ಕೇಳಿರುತ್ತೇನೆ. ಆಗ ಆರೋಪಿ ಅದಕ್ಕೆ ಒಪ್ಪಿ ನಮ್ಮೆಲ್ಲರನ್ನು ಕಳುಹಿಸಿರುತ್ತಾರೆ. ನಂತರ ಮರುದಿನ ಆರೋಪಿಯು ಹಳ್ಳದಮನುಗನಹಳ್ಳಿ ಗ್ರಾಮದ ರವಿಗೆ ಕರೆ ಮಾಡಿ ಅವರ ಬಳಿ ನನ್ನ ವಿಚಾರವಾಗಿ ಅವಾಚ್ಯ ಶಬ್ದಗಳಿಂದ ಬೋಳೀಮಗ, ಸೂಳೇಮಗ, ಆತ ಥರ್ಡ್ ಕ್ಲಾಸ್ ಎಂದು ನಿಂದಿಸಿ, ಅಲ್ಲದೇ ಆತ ಕೀಳು ಜಾತಿಗೆ ಸೇರಿದವನು ಎಂದು ಜಾತಿ ನಿಂದನೆಯನ್ನೂ ಸಹ ಮಾಡಿ ಆತನನ್ನು ಠಾಣೆಗೆ ಕರೆದುಕೊಂಡು ಬರಬೇಡ, ಠಾಣೆಗೆ ಕರೆದುಕೊಂಡು ಬಂದರೆ ಆತನ ಕೈ-ಕಾಲನ್ನು ಮುರಿಯುತ್ತೇನೆಂದು ತಿಳಿಸಿದ್ದು ಅದನ್ನು ಸದರಿ ರವಿಯವರು ತನ್ನ ಮೊಬೈಲ್ ನಲ್ಲಿ ಆಡಿಯೋ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ

ಹಳ್ಳದಮನುಗನಹಳ್ಳಿ ಗ್ರಾಮದ ವಾಸಿಯಾದ ಆನಂದ ಎನ್ನುವವರು ನನಗೆ ಫೋನ್ ಮಾಡಿ ಸದರಿ ವಿಚಾರವನ್ನು ತಿಳಿಸಿ ಸದರಿ ಆಡಿಯೋ ಮೊಬೈಲ್ ಗಳಲ್ಲಿ ಹರಿದಾಡುತ್ತಿರುವುದಾಗಿಯೂ ಸಹ ತಿಳಿಸಿರುತ್ತಾರೆ. ನಂತರ ಹಳ್ಳದಮನುಗನಹಳ್ಳಿ ಗ್ರಾಮದ ವಾಸಿಯಾದ ರವಿ ನನ್ನ ಬಳಿ ಬಂದು ನಡೆದ ವಿಚಾರವನ್ನು ತಿಳಿಸಿ ಸದರಿ ಮೊಬೈಲ್ ನಲ್ಲಿದ್ದ ಆಡಿಯೋವನ್ನು ಸಹ ನನಗೆ ತೋರಿಸಿರುತ್ತಾರೆ. ನಂತರ ನಾನು ದಿನಾಂಕಃ 07.03.2023 ರಂದು ಪೋಲೀಸ್ ಠಾಣೆಗೆ ಹೋಗಿ ಈ ಬಗ್ಗೆ ಆರೋಪಿಯ ಬಳಿ ಹೋಗಿ ಏಕೆ ಸ್ವಾಮಿ ನಾನು ಏನು ಮಾಡದೇ ಇದ್ದರೂ ನೀವು ಆ ರೀತಿ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದೀರಿ, ನಾನು ತಾಲ್ಲೋಕು ಕುರುಬರ ಸಂಘದ ಖಜಾಂಚಿಯಾಗಿದ್ದು, ಮಾಜಿ ಕಾಡಾ ನಿರ್ದೇಶಕನಾಗಿದ್ದು, ಸಮಾಜದಲ್ಲಿ ಗೌರವಯುತವಾಗಿ ಬದುಕುತ್ತಿದ್ದೇನೆಂದು ತಿಳಿಸಿದ್ದು ಆಗ ಆರೋಪಿಯು ಅಲ್ಲಿಯೂ ಸಹ ನನಗೆ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿ ಬೋಳೀಮಗನೇ ನಿನ್ನನ್ನು ಒದ್ದು ಕೇಸು ಹಾಕಿ ಜೈಲಿಗೆ ಕಳುಹಿಸುತ್ತೇನೆಂದು ಬೈದಿರುತ್ತಾರೆ. ನಂತರ ನಾನು ಅಲ್ಲಿಂದ ಹೊರಟ ಬಂದು ಮರುದಿನ ಅಂದರೆ ದಿನಾಂಕಃ 08.03.2023 ರಂದು ಈ ಬಗ್ಗೆ ಮೈಸೂರಿನ ಎಸ್.ಪಿ. ಕಛೇರಿಗೆ ಹೋಗಿ ದೂರನ್ನು ನೀಡಿದ್ದು ಅವರು ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿ ಡಿ.ವೈ.ಎಸ್.ಪಿ. ಕಛೇರಿಗೆ ಹೋಗುವಂತೆ ತಿಳಿಸಿರುತ್ತಾರೆ. ನಂತರ ನಾನು ಮರುದಿನ ಅಂದರೆ ದಿನಾಂಕಃ 09.03.2023 ರಂದು ಡಿ.ವೈ.ಎಸ್.ಪಿ., ಹುಣಸೂರು ವಿಭಾಗ ಇವರಿಗೆ ದುಾರನ್ನು ನೀಡಿದ್ದು ಅವರೂ ಸಹ ದೂರನ್ನು ಸ್ವೀಕರಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿ ನನ್ನನ್ನು ಕಳುಹಿಸಿಕೊಟ್ಟಿರುತ್ತಾರೆ. ಆದರೆ ತಿಳಿಸಿದಂತೆ

ಡಿ.ವೈ.ಎಸ್.ಪಿ. ಅವರಾಗಲೀ ಅಥವಾ ಎಸ್.ಪಿ. ಯವರಾಗಲೀ ಆರೋಪಿಯ ವಿರುದ್ಧ ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಂತರ ದಿನಾಂಕಃ 20.03.2023 ರಂದು ನ್ಯಾಯಾಲಯಕ್ಕೆ ಈ ಖಾಸಗಿ ಪಿರ್ಯಾದನ್ನು ಸಲ್ಲಿಸಿರುತ್ತೇನೆ. ನಾನು ಸಮಾಜದಲ್ಲಿ ಗೌರವಯುತ ಸ್ಥಾನದಲ್ಲಿದ್ದು ರಾಜಕೀಯವಾಗಿಯೂ ಸಹ ತೊಡಗಿಕೊಂಡಿದ್ದು ಆರೋಪಿಯ ಮೇಲೆ ಹೇಳಿದ ಹೇಳಿಕೆ ಹಾಗು ನಿಂದನೆ ನನ್ನ ಸ್ಥಾನವನ್ನು ಸಮಾಜದಲ್ಲಿ ಕುಗ್ಗಿಸುವಂತೆ ಮಾಡಿರುತ್ತದೆ ಹಾಗು ನನಗೆ ಸಮಾಜದಲ್ಲಿ ಮಾನನಷ್ಟ ಸಹ ಆಗಿರುತ್ತದೆ.

ನನ್ನ ಪಿರ್ಯಾದಿನ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಾನು ದಿನಾಂಕಃ 08.03.2023 ರಂದು ಎಸ್.ಪಿ. ಯವರಿಗೆ ನೀಡಿದ ದೂರಿನ ಸಂಬಂಧ ಅವರು ನೀಡಿದ ಸ್ವೀಕೃತಿಯ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಸಿ.-1** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರೆದ ಹೇಳಿಕೆ / ದಾಖಲೆಗಳನ್ನು ಗುರುತಿಸಲು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**